# ಸಂಪರ್ಕವು ಬೋಧನಾ ವಿಧಾನವಾಗುವ ವಿಚಾರ | ಒಂದು ತಂತ್ರ

ಜೊಯೀತಾ ಬ್ಯಾನರ್ಜಿ

**'ಸಂಪರ್ಕ'ವು ಒಂದು ತಂತ್ರವಾಗಿರುವುದರ ಧ್ಯೇಯ**

ಈ ಲೇಖನದ ಉದ್ದೇಶವು, ಸಂಪರ್ಕವನ್ನು ಏರ್ಪಡಿಸುವುದರ ಕುರಿತಾಗಿ ಮತ್ತು ಔಪಚಾರಿಕ ಕಲಿಕೆಯ ಪರಿಧಿಯಲ್ಲಿ ಸಂಪರ್ಕದ ಬೋಧನಾ ವಿಧಾನವನ್ನು ಬೆಳೆಸುವ ಒಂದು ಸಂವಾದವನ್ನು ಹುಟ್ಟುಹಾಕಲಿ ಎಂಬುದಾಗಿದೆ ಎಂದು ಆರಂಭದಲ್ಲೇ ತಿಳಿಸಬಯಸುತ್ತೇನೆ. ಇಡೀ ಜಗತ್ತು ಒಂದು ಪಿಡುಗಿನ, ಜನಾಂಗೀಯತೆಯ ಮತ್ತು ಹವಾಮಾನ ಬಿಕ್ಕಟ್ಟಿನಿಂದಾಗಿ ನಲುಗಿರುವ ಸಮಯದಲ್ಲಿ ಇದು ಅತಿಮುಖ್ಯವಾದ ಅಗತ್ಯವಾಗಿದೆ. ನಮ್ಮ ಕಲಿಕೆಯು ಕೇವಲ ಕಲಿಸುವ ಒಂದು ಯಂತ್ರವಾಗಿ ಕಾರ್ಯ ನಿರ್ವಹಿಸದೇ, ಮೇಲ್ವಿಚಾರಣೆಯನ್ನು ಮಾಡುವ, ಶ್ರೇಣೀಕರಿಸುವ, ಪ್ರತಿಫಲವನ್ನು ನೀಡುವ ಯಂತ್ರವಾಗಿಯೂ ಸಹ ಕೆಲಸಮಾಡುವ ಆವೃತ ಶೈಕ್ಷಣಿಕ ಪರಿಸರದಲ್ಲಿ [ಫುಕೋ (Foucault), 1991] ಶೋಚನೀಯವಾದ ವೈಫಲ್ಯವನ್ನು ಕಂಡಿದ್ದು, 'ಮಾನಸಿಕ ಆತಂಕವನ್ನು ಹಾಗೂ ಅಸ್ತಿತ್ವದ ಅನಿಶ್ಚಿತತೆಯನ್ನು ಹುಟ್ಟುಹಾಕಿದೆ' [ಪಾಠಕ್, 2020].

ಇದು ಏಕೆ? ಏಕೆಂದರೆ, ನಮ್ಮ ಸಂಪರ್ಕ ರಾಹಿತ್ಯವು ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ವಾಸ್ತವದಲ್ಲಿ ಬೇರೂರಿದ ಕಲಿಕಾರ್ಥಿಗೆ, ಅದರಲ್ಲಿಯೂ ವಿಶೇಷವಾಗಿ ಅವಕಾಶವಂಚಿತ ಕಲಿಕಾರ್ಥಿಯ ಕಲಿಯುವ ಅವಕಾಶಗಳನ್ನು ನಿರ್ಮಿಸುವುದಿಲ್ಲ. ವಿವಿಧ ಶೈಕ್ಷಣಿಕ ನೀತಿಗಳು ಮತ್ತು ಯೋಜನೆಗಳಿಂದಾಗಿ ಶಿಕ್ಷಣದ ಪ್ರೌಢಶಾಲಾ ಮಟ್ಟವು ಈಗ ಮೊದಲ ತಲೆಮಾರಿನ ಕಲಿಕಾರ್ಥಿಗಳಿಂದ ತುಂಬಿಹೋಗಿದೆ. ಗ್ರಾಮೀಣ ಪ್ರೌಢಶಾಲೆಗಳಲ್ಲಿರುವ ಮೊದಲ ತಲೆಮಾರಿನ ಕಲಿಕಾರ್ಥಿಗಳು 'ವಿವಿಧ ಸಾಮಾಜಿಕ ವರ್ಗಗಳಿಗೆ ಸೇರಿರುವವರು' (ಬ್ಯಾನರ್ಜಿ, 2017) 'ಆವರಣದೊಳಗಿನ ಔಪಚಾರಿಕ ಶಿಕ್ಷಣ ಪರಿಸರಗಳಲ್ಲಿ' ತಾವು ಪರಕೀಯರು ಎಂಬ ಭಾವನೆಯನ್ನು ಅನುಭವಿಸುತ್ತಾರೆ. ಏಕೆಂದರೆ, ಬೋಧನಾಕ್ರಮವು ಈ ವಿದ್ಯಾರ್ಥಿಗಳನ್ನು ಯಾವ ರೀತಿಯಲ್ಲಿ ಪ್ರೇರೇಪಿತರಾಗುತ್ತಾರೆ, ಯಶಸ್ವಿಯಾಗುತ್ತಾರೆ, ಹೇಗೆ ಭಾಷಾ ಕಲಿಕೆ ನಂಬಿಕೆಗಳನ್ನು ಕಟ್ಟಿಕೊಳ್ಳುತ್ತಾರೆ ಹಾಗೂ ಹೇಗೆ ಸಂಸ್ಕೃತಿಗ್ರಹಣಕ್ಕೊಳಗಾಗುತ್ತಾರೆ ಎಂಬುದನ್ನು ಕಡೆಗಣಿಸುತ್ತದೆ (ಜಮ್ಮಿದಿ, 2013). ಹಾಗಾಗಿ ಅವಕಾಶವಂಚಿತ ಕಲಿಕಾರ್ಥಿಗಳು ಎಷ್ಟನೇ ತಲೆಮಾರಿನವರು ಎಂಬುದನ್ನು ಪರಿಗಣಿಸದೆಯೇ 'ಸಮಾನ ಭಾಗವಹಿಸುವಿಕೆ'ಯನ್ನು ಖಾತ್ರಿಪಡಿಸುವ ಒಂದು ಕಲಿಕಾ ಅವಕಾಶಗಳನ್ನು ನಿರ್ಮಿಸುವುದು ಶಿಕ್ಷಣದ ಎಲ್ಲ ಭಾಗಿದಾರರ ಜವಾಬ್ದಾರಿಯಾಗಿದೆ.

ಮೊದಲ ತಲೆಮಾರಿನ ಕಲಿಕಾರ್ಥಿಗಳು ಶಾಲೆಯಲ್ಲಿ ಎದುರಿಸುವ ಸವಾಲುಗಳು ಮತ್ತು ಶಾಲೆಯ ಪ್ರಕ್ರಿಯೆಗಳು ಹೇಗೆ ಅವರನ್ನು ಪರಕೀಯ ಪ್ರಜ್ಞೆಗೆ ಕಾರಣವಾಗುತ್ತವೆ ಎಂಬುದನ್ನು ನಾನು ನನ್ನ ಬೇರೆ ಲೇಖನದಲ್ಲಿ ಚರ್ಚಿಸಿದ್ದೇನೆ (ಬ್ಯಾನರ್ಜಿ, 2018). ಔಪಚಾರಿಕ ಆವೃತ ಶೈಕ್ಷಣಿಕ ಪರಿಸರವು 'ಸಂಸ್ಕೃತಿಗಳ ಮುಖಾಮುಖಿ ಮಾಡುವ, ಸಂಘರ್ಷಗಳು ಮತ್ತು ಪರಸ್ಪರ ತಾಕಲಾಟಗಳ, ಅತಿಯಾದ ಅಧಿಕಾರದ ಅಸಮತೋಲಿತ ಸಂಬಂಧಗಳ ಸನ್ನಿವೇಶಗಳನ್ನೊಳಗೊಂಡ ಸಾಮಾಜಿಕ ಕ್ಷೇತ್ರವಾಗಿದೆ (ಪ್ರ್ಯಾಟ್, ಪು.34).

'ಬ್ಯಾಂಕಿಂಗ್ ಮಾದರಿಯ ಆಧಾರದ' [ಫ್ರೈರೆ, 1970] ಮೇಲೆ ನೀಡುವ 'ಕಡೆಗಣಿತ ಬೋಧನಾ ಕ್ರಮ'ದಲ್ಲಿಯೂ ವಿಮರ್ಶಾತ್ಮಕ ಪರಿಶೀಲನೆಯನ್ನು ಬಯಸುವ ಒಬ್ಬ ಭಾಷಾಕಲಿಕೆಯ ಸುಗಮಕಾರನಾಗಿ, ಸಂಶೋಧಕನಾಗಿಯೂ ನನ್ನ ಈ ಲೇಖನದ ಪರಿಕಲ್ಪನಾತ್ಮಕ ಚೌಕಟ್ಟು 'ವಿಮರ್ಶಾತ್ಮಕ ಪ್ರಜ್ಞೆಯ' ಆಧಾರದಲ್ಲಿದೆ. 'ನಾಲ್ಕನೆಯ ಗೋಡೆಯನ್ನು ಕೆಡವಿ' [ಬ್ರೆಕ್ಟ್‌ನ ರಂಗ ತಂತ್ರ] ನಿಯೋಜಿಸಬಹುದಾದ ಬೋಧನಾ ವಿಧಾನವನ್ನು ಅಭಿವೃದ್ಧಿಪಡಿಸಲು ಮತ್ತು ಎಲ್ಲಾ ಕಲಿಯುವವರಲ್ಲಿ ಒಂದು 'ವಿಮರ್ಶಾತ್ಮಕ ಪ್ರಜ್ಞೆಯನ್ನು' ಸೃಷ್ಟಿಸಲು ಈ ಲೇಖನವು ಅಡಿ ಇಡುತ್ತದೆ.

**ಕಡೆಗಣಿಸುವುದನ್ನು ಗುರುತಿಸುವುದು**

ಭಾಷೆಯ, ಅದರಲ್ಲಿಯೂ ವಿಶೇಷವಾಗಿ ಎರಡನೆಯ ಭಾಷೆಯ ಸುಗಮಕಾರನಾಗಿ, ನನ್ನ ಮನಸ್ಸಿನಲ್ಲಿರುವುದೇನೆಂದರೆ, ಶಿಕ್ಷಣದ ನೀತಿ, ಯೋಜನೆಗಳು ಹಾಗೂ ಸವಲತ್ತುಗಳ ಬೇಡಿಕೆಗಳಿಂದ ನಿರ್ದೇಶಿತವಾಗುವ ಭಾಷಾ ಶಿಕ್ಷಣದ ಗುರಿಗಳು 'ತರಗತಿ ಮಟ್ಟದ ಸಾಮರ್ಥ್ಯಗಳನ್ನು' ಬೆಳೆಸುವುದು ಹಾಗೂ ವಿದ್ಯಾರ್ಥಿಗಳನ್ನು ಹೊಸ ಸಾಂಸ್ಕೃತಿಕ ನಿಯಮಗಳಿಗೆ ತೆರೆದುಕೊಳ್ಳುವಂತೆ ಮಾಡಬೇಕು ಎನ್ನುವುದಾಗಿದೆ. ಮೊದಲ ತಲೆಮಾರಿನ ಕಲಿಕಾರ್ಥಿಗಳಿಗೆ ಎರಡನೇ ಭಾಷೆಯನ್ನು ಕಲಿಯುವುದು ಎಂದರೆ ಅದೊಂದು ಅಗ್ನಿಪರೀಕ್ಷೆಯೇ ಆಗಿರುತ್ತದೆ. [ಬ್ರೌನ್, 1986] ಏಕೆಂದರೆ, 'ಔಪಚಾರಿಕ, ವಿಸ್ತಾರವಾದ, ಸಂದರ್ಭ ರಹಿತ ಶಾಲೆಯ ಭಾಷೆಯು, ಮನೆಯಲ್ಲಿನ ಸೀಮಿತ ವ್ಯಾಪ್ತಿಯ ಸಂಕೇತಗಳಿಗಿಂತ ವಿಭಿನ್ನವಾಗಿರುತ್ತದೆ' [ಬಾರ್ನ್ ಸ್ಟೀನ್, 1971]. ಅದಕ್ಕೂ ಹೆಚ್ಚಾಗಿ, ಬರೆಯಲು ಆರಂಭಿಸುವುದಕ್ಕಿಂತ ಮುಂಚೆಯೇ ವ್ಯಾಕರಣವನ್ನು ಕಲಿಯುವ ಹೊರೆಯಿಂದಾಗಿ ಅನ್ಯ ಭಾಷೆಯೊಡನೆ ಅರ್ಥಪೂರ್ಣವಾದ ಸಂಬಂಧವನ್ನು ಬೆಳೆಸುವ ಸಾಧ್ಯತೆಯನ್ನೇ ಹಾಳುಗೆಡವುತ್ತದೆ. ಹಾಗಾಗಿ ನಾನು ಭಾಷಾ ಬೋಧನಾ ವಿಧಾನದ ಒಳಗೆ ಅಡಗಿಕೊಂಡಿರುವ ಕಡೆಗಣನೆಗೆ ಒಳಗಾದ ಅಂಶಗಳನ್ನು ಗುರುತಿಸಿ ನೋಡುವುದೇ, ಸಂಪರ್ಕದ ಬೋಧನಾ ಕ್ರಮದ ಮೊದಲ ಹೆಜ್ಜೆ ಎಂದು ಸೂಚಿಸುತ್ತೇನೆ ಹಾಗು ಅದುವೇ ಇಡೀ ಭಾಷಾ ಕಲಿಕೆಯ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಪುನರುಜ್ಜೀವನಗೊಳಿಸುವ ಹಾಗು ತಾರ್ಕಿಕ ಪ್ರಜ್ಞೆಯ ರೂಪುಗೊಳ್ಳುವಿಕೆಗೆ ಸಹಾಯಮಾಡುವ ತಂತ್ರಕ್ಕೆ ಅಡಿಪಾಯವೆಂದು ಕೂಡ ಭಾವಿಸುತ್ತೇನೆ.

ಸರ್ಕಾರಿ ಅನುದಾನಿತ ಗ್ರಾಮೀಣ ಪ್ರೌಢಶಾಲೆಯಲ್ಲಿ ಭಾಷಾ ಸುಗಮಕಾರನಾಗಿಯೂ ಮತ್ತು ಸ್ವತಂತ್ರ ಸಂಶೋಧಕನಾಗಿಯೂ ಇರುವ ನಾನು ನಮ್ಮ ಶಿಕ್ಷಣ ವ್ಯವಸ್ಥೆಯು ಅಭಿವೃದ್ಧಿ ಮತ್ತು ಅಸಮಾನತೆಯಲ್ಲಿ ಕೇಂದ್ರೀಕೃತವಾದ ಆರ್ಥಿಕ ಪ್ರಗತಿಯಲ್ಲಿ ಸಿಲುಕಿಕೊಂಡಿದೆ ಎಂದು ಗ್ರಹಿಸಿದ್ದೇನೆ. ಪರಕೀಯನನ್ನಾಗಿಸುವ

ಪ್ರಕ್ರಿಯೆ ಇಲ್ಲಿಂದಲೇ ಆರಂಭವಾಗುತ್ತದೆ. ಎಲ್ಲ ಕಲಿಯುವವರಲ್ಲಿ 'ಮೌನದ ಸಂಸ್ಕೃತಿ' ಬೀಡುಬಿಟ್ಟಿದ್ದು ಅದು ಮೊದಲ ತಲೆಮಾರಿನ ಕಲಿಯುವವರಲ್ಲಿ ಇನ್ನೂ ಹೆಚ್ಚಿದೆ.

ನಾನು ದ್ವಿತೀಯ ಭಾಷೆ ಶಿಕ್ಷಕನಾಗಿ, ನನ್ನ ಬೋಧನಾ ವಿಧಾನಗಳು ಹೇಗೆ ಕೇವಲ ಒಂದು 'ಭಾಷೆಯ ಪ್ರಾಬಲ್ಯವನ್ನು ಹೇರುವ ಸಾಧನವಾಗುತ್ತಿದೆ' (ಫಿಲಿಪ್ಸನ್, 1992) ಮತ್ತು ಏಕಭಾಷೆಯ ಜಗತ್ತಿನ ಪ್ರಬಲ ನಿರೂಪಣೆಯನ್ನು ಸ್ಥಾಪಿಸುತ್ತಿದೆ ಎಂಬುದನ್ನು ಗುರುತಿಸಬೇಕಾಗುತ್ತದೆ. ಇದು ಮೊದಲ ತಲೆಮಾರಿನ ಕಲಿಕಾರ್ಥಿಗಳಿಗೆ ಭಾಷಾ ಕಲಿಕೆಯ ಬಗೆಗೆ ಇರುವ ತಮ್ಮ ನಂಬಿಕೆಗಳನ್ನು ಪ್ರಶ್ನಿಸುವುದನ್ನು ಪ್ರಾರಂಭಿಸಲು ಸಹಾಯ ಮಾಡುತ್ತದೆ. ಮೊದಲ ತಲೆಮಾರಿನ ಕಲಿಕಾರ್ಥಿಗಳಿಗೆ ತಮ್ಮ ಭಾಷಾಕಲಿಕೆಯ ನಂಬಿಕೆಗಳನ್ನು ಮತ್ತು ಅವು ಹೇಗೆ ತಮ್ಮ ಮಾತೃಭಾಷೆಯ ಬಗೆಗೆ ಅವರ ಮನೋಧೋರಣೆಗಳ ಮೇಲೆ ಪರಿಣಾಮ ಬೀರುತ್ತದೆ ಎಂಬುದನ್ನು ವಿಮರ್ಶಾತ್ಮಕವಾಗಿ ನೋಡುವಂತೆ ಉತ್ತೇಜಿಸಬೇಕು. ಇದು ಸವಲತ್ತು ಪಡೆದ ವರ್ಗದ ಭಾಷೆಗಳಲ್ಲಿ ಹಾಗೂ ಶಾಲೆಗಳಲ್ಲಿ ಅನುಸರಿಸುತ್ತಿರುವ ಬೋಧನಾ ವಿಧಾನದ ತಂತ್ರಗಳಲ್ಲಿ ಕಡೆಗಣನೆಯು ಹೇಗೆ ಒಳಗೊಂಡಿದೆ ಎಂಬುದನ್ನು ಪ್ರಶ್ನಿಸಲು ಸಹಾಯ ಮಾಡುತ್ತದೆ. ಒಮ್ಮೆ ಈ ಕಡೆಗಣನೆಯನ್ನು ಗುರುತಿಸಿದರೆ, ಮುಂದಿನ ಹೆಜ್ಜೆಗಳು ಸರಿಯಾಗಿ ಕೂಡಿಕೊಳ್ಳುತ್ತವೆ.

**ತರಗತಿಯ ಆಯೋಜನೆ**

ಸಂಪರ್ಕ ಸಾಧಿಸಿದ ಕಲಿಕೆಯನ್ನು ಹುಟ್ಟುಹಾಕುವಲ್ಲಿ ತರಗತಿಯ ಆಯೋಜನೆಯು ಪ್ರಮುಖ ಪಾತ್ರವಹಿಸುತ್ತದೆ ಎಂದು ನಾನು ಗುರುತಿಸುತ್ತೇನೆ. ಒಬ್ಬ ಶಿಕ್ಷಕಿಯು ತನ್ನ ತರಗತಿಯನ್ನು ಹೇಗೆ ಆಯೋಜಿಸಿಕೊಳ್ಳುತ್ತಾರೆಂಬ ರಚನಾತ್ಮಕ ಆಯಾಮವನ್ನು ಇದು ಸೂಚಿಸುತ್ತದೆ [ಸ್ಟ್ರೇಂಜ್, ಮತ್ತು ಇತರರು]. ಇಂದಿನ ತರಗತಿಯ ಭೌತಿಕ ಆಯೋಜನೆಯ ವಿದ್ಯಾರ್ಥಿಗಳು ಸಾಲುಗಳಲ್ಲಿ ಕುಳಿತಿದ್ದು ಶಿಕ್ಷಕರು ಅವರ ಎದುರಿಗೆ ಅವರ ವಿರುದ್ಧ ನಿಂತಂತೆ ಇರುತ್ತದೆ. ಈ ಆಯೋಜನೆಯು ಬಹಳ 'ಸೂಕ್ಷ್ಮವಾಗಿ' 'ವರ್ಗೀಕರಿಸಿ' ನೋಡುವ ಯಜಮಾನ ದೃಷ್ಟಿಯ ಅಡಿಯಲ್ಲಿ ಈ ವ್ಯವಸ್ಥೀಕರಿಸಿದ ವಿವಿಧ ನಮೂದುಗಳ ಒಂದು ದೊಡ್ಡ ಪಟ್ಟಿಯನ್ನು ತಯಾರಿಸುತ್ತದೆ [ಫುಕೋ 1991]. ಈ ಬಗೆಯ ವ್ಯವಸ್ಥೆಯನ್ನು ಮೊದಲ ಬಾರಿಗೆ ನೋಡುವ ಮೊದಲ ತಲೆಮಾರಿನ ಕಲಿಕಾರ್ಥಿ ಹೊರಗಿನವರಂತೆ ಭಾವನೆಯನ್ನು ಅನುಭವಿಸುತ್ತಾರೆ ಮತ್ತು ತರಗತಿಯ ಪ್ರಕ್ರಿಯೆಯೊಡನೆ ಅರ್ಥಪೂರ್ಣ ಸಂಪರ್ಕ ಸಾಧಿಸುವಲ್ಲಿ ತಡೆಗಳನ್ನೆದುರಿಸುತ್ತಾರೆ. ಹಾಗಾಗಿ ಅವರು ತರಗತಿಗನುಗುಣವಾದ ಸಾಮರ್ಥ್ಯಗಳನ್ನು ಪಡೆಯುವಲ್ಲಿ ಹಿಂದುಳಿಯುತ್ತಾರೆ. ಶಿಕ್ಷಕರು ಮತ್ತು ಈಗಾಗಲೇ ತರಗತಿಯಲ್ಲಿನ ಔಪಚಾರಿಕ ಶಿಕ್ಷಣದ ಪರಿಚಯವಿರುವ ಇತರರ ಹತ್ತಿರವಿರದಂತೆ ತಪ್ಪಿಸಿಕೊಳ್ಳುತ್ತಾರೆ [ಬ್ಯಾನರ್ಜಿ, 2013]. ಹಾಗಾಗಿಯೇ ಆಯೋಜನೆಯನ್ನು ಗುಂಡಗಿರುವಂತೆಯೋ ಇಲ್ಲ ಅರೆಸುತ್ತಿನಾಕಾರದಲ್ಲಿಯೋ ಇರುವಂತೆ ಮಾರ್ಪಡಿಸಿ ತಾನೂ ಆ ಸುತ್ತಿನೊಳಗೆಯೇ ಕುಳ್ಳಿರುವಂತೆ ಮಾಡಿಕೊಳ್ಳಬೇಕು. ದೊಡ್ಡ ತರಗತಿಗಳಲ್ಲಿ ಇದು ಒಂದು ಸವಾಲಾಗುತ್ತದೆ. ಅಂತಹ ತರಗತಿಗಳಲ್ಲಿ ಪ್ರತಿದಿನವೂ ಮಕ್ಕಳು, ಶಿಕ್ಷಕರು ಕುಳಿತುಕೊಳ್ಳುವ ಸ್ಥಳಗಳು ಬದಲಾಗುತ್ತಿರಬೇಕು.

**ಕಲಿಕಾರ್ಥಿಗಳನ್ನು ತೊಡಗಿಸಿಕೊಳ್ಳುವುದು**

ನಾನು ಭಾಷೆಯನ್ನು ಕಲಿಸುವ ತರಗತಿಗಳು ನಿರ್ಬಂಧಿತ ಶಿಕ್ಷಣ ಸ್ಥಳಗಳು, ಅವು ಆರೋಗ್ಯ, ಅರ್ಹತೆ, ರಾಜಕೀಯ ಮತ್ತು ನೈತಿಕತೆ [ಫುಕೋ, 1991] ಗಳನ್ನು ಹೇರುವ ಹಾಗೂ ನಿಜ ಜೀವನದ ಲವಲವಿಕೆಯನ್ನೇ ಕಡೆಗಣಿಸುವ ಬೋಧನಾ ವಿಧಾನದ ಯಂತ್ರಗಳಾಗಿದೆ. ನಾನು ನೀಡುತ್ತಿರುವ ಶಿಕ್ಷಣವು ಆಧುನಿಕತೆಯ ಸ್ವ-ಗ್ರಹಿಕೆಯಲ್ಲಿಯೇ ಮುಳಗಿ ಹೋಗಿದೆ. ಈ ಆಧುನಿಕತೆಯು, ಪ್ರಕೃತಿಯ ಮೇಲಿನ ಮನುಷ್ಯನ ವಿಜಯ ಕಲ್ಪನೆ, ವಿಜ್ಞಾನ ತಂತ್ರಜ್ಞಾನದ ಮೂಲಕ ಸಾಧಿಸುವ ಅನಿಯಮಿತ 'ಪ್ರಗತಿ' ಯಲ್ಲಿ ನಂಬಿಕೆ ಇಟ್ಟುಕೊಂಡು ಮತ್ತು ಸಂಭವನೀಯತೆಯನ್ನು ಊಹಿಸುವ ನಿಯಂತ್ರಿಸುವ, ಮತ್ತು ವ್ಯವಸ್ಥಿತಗೊಳಿಸುವ ಅಧಿಕಾರದಲ್ಲಿ ನಂಬಿಕೆಯನ್ನು [ಪಾಠಕ್, 2020] ಇಟ್ಟುಕೊಂಡಿರುತ್ತದೆ.

ಮೊದಲ ತಲೆಮಾರಿನ ಕಲಿಕಾರ್ಥಿಗಳು, ಪ್ರೌಢ ಶಿಕ್ಷಣದಲ್ಲಿ ಈಗ ಹೆಜ್ಜೆ ಇಡುತ್ತಿರುವ ಸಾಮಾಜಿಕ ಶ್ರೇಣೀಕರಣದ ಒಂದು ಔಪಚಾರಿಕ ವಿಸ್ತರಿಕೆಗಾಗಿ 'ಆಧುನಿಕ ಕಲಿಕೆ' ಎಂದು ಕರೆಯಲ್ಪಡುವ ಕಲಿಕಾ ನಿಬಂಧನೆಗಳಲ್ಲಿ ಮುಳುಗಿ ಹೋಗಲು ಯತ್ನಿಸುತ್ತಿದ್ದಾರೆ. ಕಲಿಕಾರ್ಥಿಗಳು, ಸ್ವತಃ ಈಗಾಗಲೇ ಅವರ ಅನುಭವಾತ್ಮಕ ಬದುಕಿನಿಂದ ದಕ್ಕಿಸಿಕೊಡುವಂತಹ ವಿಶಾಲ ವ್ಯಾಪ್ತಿಯ, ವ್ಯವಸ್ಥಿತ ರೂಪದಲ್ಲಿ ಜೋಡಿಸಿಟ್ಟ ಜ್ಞಾನದಿಂದ ಶ್ರೀಮಂತರಾಗಿದ್ದಾರೆ ಎಂಬುದನ್ನು ಅವರಿಗೆ ಒತ್ತಿ ಹೇಳಬೇಕಾಗಿದೆ. ಇಂದು ಶಿಕ್ಷಕರ ಮತ್ತು ಅಧ್ಯಾಪಕರು 'ಸೂಕ್ಷ್ಮ ಒಳಭೇದಗಳನ್ನೊಳಗೊಂಡ ಬದುಕುವ ಕಲಿಕೆಯೊಂದಿಗೆ' [ಪಾಠಕ್, 2020] ಒಂದು ಅರ್ಥವತ್ತಾದ ಸಂಬಂಧ ಇಟ್ಟುಕೊಳ್ಳುವುದರ ಬಗೆಗೆ ತಿಳಿಸಲು ಸೋತಿದ್ದು, ಇಂತಹ ಇವತ್ತಿನ ಜಗತ್ತಿನಲ್ಲಿ ಕಲಿತ 'ಆಧುನಿಕತೆಯನ್ನು ಮರೆಯುವುದಕ್ಕೆ' ಸುಗಮಕಾರರು ಮತ್ತು ಇತರರಿಗೆ ಸಹಾಯಮಾಡುವಂತೆ ಕಲಿಕಾರ್ಥಿಗಳನ್ನು ಉತ್ತೇಜಿಸಬೇಕಿದೆ.

ಭಾಷೆಯ ತರಗತಿಗಳಲ್ಲಿ ಕಡಿಮೆ ನಿಬಂಧನೆಗಳಿಗೆ ಒಳಪಟ್ಟ ತೊಡಗಿಸಿಕೊಳ್ಳುವಿಕೆಯು ಸ್ಥಳೀಯ ಸಾಹಿತ್ಯ ಮತ್ತು ಹಾಡುಗಳ ಮೂಲಕ ಅವರ ಘನತೆಯನ್ನು ಎತ್ತಿ ಹಿಡಿಯಬಲ್ಲ ಚಿಮ್ಮುಹಲಗೆಯ ರೀತಿಯಲ್ಲಿ ಕೆಲಸಮಾಡಬೇಕು. ಕಲಿಕಾರ್ಥಿಯು ಯಾವ ತಲೆಮಾರಿನವರು ಎಂಬುದನ್ನು ಬದಿಗಿಟ್ಟು, ನಿಸರ್ಗವನ್ನು ಶೋಷಿಸುವುದರ ಪರಿಣಾಮಗಳನ್ನು ಅರಿಯಬಲ್ಲರು ಮತ್ತು ಮಾನವ ನಿರ್ಮಿತ ಹವಾಮಾನ ಬಿಕ್ಕಟ್ಟಿನಲ್ಲಿ ತಮ್ಮ ಪಾತ್ರಗಳನ್ನೂ ವಿಮರ್ಶಾತ್ಮಕವಾಗಿ ಪ್ರಶ್ನಿಸಿಕೊಳ್ಳಬಲ್ಲರು. ತಗತಿಯಲ್ಲಿ ಒಂದು ಸಂವಾದಾತ್ಮಕ ಸಂಬಂಧಗಳನ್ನು ಉತ್ತೇಜಿಸಲು ಮತ್ತು ಸಂವಾದದಲ್ಲಿ ಶಿಕ್ಷಕರೊಂದಿಗೆ ವಿಮರ್ಶಾತ್ಮಕ ಸಹ ಪರಿಶೀಲಕರಾಗುವ ಹೊಸ ತಾಲಿಮೀಗೆ ಕಲಿಕಾರ್ಥಿಯನ್ನು ಪರಿಚಯಿಸಲು, ವಿದ್ಯಾರ್ಥಿಗಳಿಗೆ ಅವರದೇ ಆಯ್ಕೆಯ ವಿಷಯಗಳ ಬಗ್ಗೆ ಪ್ರತಿವಾರವೂ ಅವರ ನೇತೃತ್ವದಲ್ಲಿ ಗೋಷ್ಠಿಗಳನ್ನು ತರಗತಿಯೊಳಗೇ ಆಯೋಜಿಸಬೇಕು.

**ಮೌಲ್ಯಮಾಪನ: ಚಕ್ರದ ಕೊನೆಯ ಹುಲ್ಲು**

ಬಹು ಆಯ್ಕೆಯ ಪ್ರಶ್ನೆಗಳ ಮೂಲಕ ವಸ್ತುನಿಷ್ಠವಾಗಿ ಮೌಲ್ಯಮಾಪನ ಮಾಡುವ ಪ್ರಕ್ರಿಯೆಯು ವಿದ್ಯಾರ್ಥಿಗಳಲ್ಲಿ ಮೂಲಭೂತವಾದವನ್ನು ಹುಟ್ಟುಹಾಕಬಲ್ಲದು. ಒಂದೇ ಸರಿಯುತ್ತರದ ಪರಿಕಲ್ಪನೆಗೆ ಅವರು ಪಕ್ಕಾಗುತ್ತಿದ್ದಾರೆ. ಅದೂ ಅಲ್ಲದೇ ಈ ಎಳೆಯ ಮನಸ್ಸುಗಳು ಈಗಾಗಲೇ ಪದವಿ – ನೌಕರಿಯ ಸಂಬಂಧವನ್ನು ಗಾಢವಾಗಿ ನಂಬಿಬಿಟ್ಟಿವೆ. ಉನ್ನತ ಪದವಿ ಪಡೆದರೆ ಉನ್ನತ ನೌಕರಿ ಎಂಬ ನಂಬಿಕೆಯು ಮಾಪನ ಪ್ರಕ್ರಿಯೆಗೆ ಪುನರುಜ್ಜೀವನ ನೀಡುವುದಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ಆದ್ದರಿಂದ ವಿದ್ಯಾರ್ಥಿಗಳನ್ನು ಅದರಲ್ಲೂ ಮೊದಲ ತಲೆಮಾರಿನ ಕಲಿಕಾರ್ಥಿಗಳನ್ನು ತಾರ್ಕಿಕ ಚಿಂತನೆಗೆ ಒಡ್ಡಲು ಯೋಜನೆಗಳು

ಅವರ ನೇರ ಅನುಭವ ಮತ್ತು ಭಾಷೆಯ ಆಧಾರದ ಮೇಲಿರಬೇಕು. ಈ ತಂತ್ರವನ್ನು ಬಳಸಲು ಮೊದಲಿಗೆ ತೊಂದರೆಯಾದರೂ ಬಳಕೆಯ ಅಭ್ಯಾಸವಾದಂತೆಯೇ ವಿಮರ್ಶಾತ್ಮಕ ಪ್ರಜ್ಞೆಯನ್ನು ಬೆಳೆಸುವಂತಹ ನಿರೀಕ್ಷಿತ ಫಲಿತಗಳನ್ನು ನೀಡುತ್ತದೆ.

**ಆಕರಗಳು ಮತ್ತು ಹೆಚ್ಚಿನ ಓದಿಗಾಗಿ**


Banerjee, J. (2018). The Excluded Variable in Quality Learning: Generational Status, A Case Study of First-Generation Learners Enrolled in Rural Schools, Bankura

Barnstein, B. (1971). Class, codes and Control, Volume III, Towards A Theory of Educational Transmission

Brown, H.D. (1986). Culture Bound: Bridging the Culture Gap in Language Teaching, Cambridge Language Teaching Library

Foucault, M. (1991). Discipline and Punish, Penguin books

Garavan, M. (2010). Opening up Paulo Freire's Pedagogy of the Oppressed, ResearchGate, Doi10.2307/30023905

Jamshidi , K.(2013). Generational Status: An Ignored Variable In Language Learning, The Journal of ASIA TEFL, Vol: 10, No.2, pp-35-62, Summer 2013

Pathak, A. (2020). Mainstream, VOL. LVIII No.23

Pratt, M. L. (1991). Arts of the contact zone. Profession, 1991, 33–40. (Originally a keynote address at the Responsibilities for Literacy Conference, Pittsburgh, PA, September,1990.)





**ಜ್ಯೋಯೀತಾ ಬ್ಯಾನರ್ಜಿ** ಅವರು ಕಳೆದ 18 ವರ್ಷಗಳಿಂದ ಪಶ್ಚಿಮ ಬಂಗಾಳದ, ಬಂಕುರಾದ ನಿಕುಂಜಾಪುರ ಪ್ರೌಢಶಾಲೆಯಲ್ಲಿ ಇ.ಎಸ್.ಎಲ್ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇದಕ್ಕೂ ಮೊದಲು ಅವರು ಅರಾಲ್ಧಿಹಿ ಪೌಢಶಾಲೆಯಲ್ಲಿ ಸಹಾಯಕ ಶಿಕ್ಷಕರಾಗಿ ಮತ್ತು ಬಂಕುರ ಸಮ್ಮಿಲಾನಿ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕರಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಇವರು ಸ್ವತಂತ್ರ ಸಂಶೋಧಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಮತ್ತು ವಿವಿಧ ವಿಷಯಗಳ ಕುರಿತು ಹಲವಾರು ಪ್ರಬಂಧಗಳನ್ನು ಪ್ರಕಟಿಸಿದ್ದಾರೆ. ಜ್ಯೋಯೀತಾರವರು ರಾಷ್ಟ್ರೀಯ ಮಕ್ಕಳ ಹಕ್ಕುಗಳ ಸಂಶೋಧನಾ ಫೆಲೋಶಿಪ್ (2012)ನ್ನು ಸಿಆರ್‌ವೈನಿಂದ ಪಡೆದಿದ್ದಾರೆ. ಇವರನ್ನು joyeeta007@gmail.com ನಲ್ಲಿ ಸಂಪರ್ಕಿಸಬಹುದಾಗಿದೆ.


ಅನುವಾದ: **ಜನಾರ್ದನ** । ಪರಿಶೀಲನೆ: **ಲತಾ ಕೆ. ಸಿ.**

**ಬೀಜ ಮೊಳಕೆಯೊಡೆಯುವುದನ್ನು ಗಮನಿಸಿದರೆ, ತಮ್ಮ ಸುತ್ತಮುತ್ತಲ ಮರಗಳ ಬಗ್ಗೆ ತಿಳಿದುಕೊಳ್ಳಲು ನೆರವಾಗುತ್ತದೆ.... ಈ ವಾಸ್ತವಿಕ ಕಲಿಕೆಯು ನಮ್ಮ ಶಾಲೆಗಳ ಉದ್ದೇಶವಾಗಬೇಕು. ಅಲ್ಲದೆ ಈ ಉದ್ದೇಶವನ್ನು ಮಗುವಿಗೆ ಖಚಿತಪಡಿಸುವುದ–ರೊಂದಿಗೆ, ಔಪಚಾರಿಕ ಕಲಿಕಾ ತಾಣವು ತನಗಾಗಿ ಇರುವುದು ಹೌದೋ ಅಲ್ಲವೋ ಎಂಬುದನ್ನು ಮಗು ತಾನೇ ಪತ್ತೆ ಮಾಡುತ್ತದೆ.**

**–ಶಿವಾನಿ ತನೇಜಾ, ಕಟ್ಟಕಡೆಯ ಮಗುವನ್ನೂ ಶಾಲೆಗೆ ಕರೆತರುವುದು, ಪುಟ 95**